## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ನಂಜನಗೂಡು

## ಸಿ.ಸಿ.1234/2013

ಫಿರ್ಯಾದಿಃ ರಾಜ್ಯದ ಪರವಾಗಿ ಕವಲಂದೆ ಪೋಲೀಸ್ ಠಾಣೆ,

ವಿರುದ್ಧ

ಆರೋಪಿಗಳುಃ 1. ಕುಳ್ಳೇಗೌಡ , ಬಿನ್ ಲೇಟ್ ಕೈಯೇಗೌಡ , 56 ವರ್ಷ ,
2. ಶಿವರಾಜು , ಬಿನ್ ಕುಳ್ಳೇಗೌಡ , 42 ವರ್ಷ ,
ಇಬ್ಬರೂ ಚಿನ್ನಂಬಳ್ಳಿ ಗ್ರಾಮ , ನಂಜನಗೂಡು ತಾಃ ವಾಸಿಗಳು.

ಃ ದೋಷಾರೋಪಣೆ ಃ

ಶರ್ಮಿಳ ಎಸ್, ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶಳಾದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ ಃ-

**ಕವಲಂದೆ ಪೊಲೀಸ್ ಠಾಣಾ ಸರಹದ್ದು ಚಿನ್ನಂಬಳ್ಳಿ ಗ್ರಾಮದ ಸಾಕ್ಷಿ-3 ರವರು ತಮ್ಮ ಹಿತ್ತಲ ಜಾಗವನ್ನು ರಾಮೇಗೌಡ ಎಂಬುವರಿಗೆ ಕ್ರಯ ಮಾಡಿದ್ದು , ಆ ಜಾಗವನ್ನು 1ನೇ ಆರೋಪಿ ತಮಗೆ ಕೊಡಿಸಿಕೊಡು ಎಂದು ಕೇಳುತ್ತಿದ್ದು ಈ ವಿಚಾರದಲ್ಲಿ ಸಾಕ್ಷಿ-3 ರವರ ಮೇಲೆ ದ್ವೇಷವಿದ್ದು , ದಿನಾಂಕ 02.03.2014ರಂದು ಮದ್ಯಾಹ್ನ 3.00 ಗಂಟೆ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ-1 ರವರ ಮನೆ ಹತ್ತಿರಕ್ಕೆ ಬಂದು ಸಾಕ್ಷಿ-3 ರವರನ್ನು ಹಿತ್ತಲ ಜಾಗ ಮಾರಿಕೊಂಡಿದ್ದೀಯಾ ಅದನ್ನು ನನಗೆ ವಾಪಸ್ ಕೊಡಿಸಿಕೊಡು ಎಂದು ಸಾಕ್ಷಿ-3 ರವರ ಮೇಲೆ ಗಲಾಟೆ ಮಾಡಿ , 1ನೇ ಆರೋಪಿ ಸಾಕ್ಷಿ-3 ರವರನ್ನು ಹಿಡಿದು ಅಕ್ರಮ ಪ್ರತಿಬಂಧವನ್ನುಂಟುಮಾಡಿದ್ದರಿಂದ ಭಾ.ದಂ.ಸಂ ಕಲಂ 341 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹವಾದ ಅಪರಾದವನ್ನೆಸಗಿರುವಿರೆಂದು ನಿಮ್ಮ ವಿರುದ್ಧ ದೋಷಾರೋಪಿಸಲಾಗಿದೆ.**

**ಎರಡನೆಯದಾಗಿ ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ 2ನೇ ಆರೋಪಿ ಸಾಕ್ಷಿ-3ರವರಿಗೆ ಕೈಯಿಂದ**

ಮೈಕೈಗೆ , ಎಡ ಮೊಣಕೈಗೆ ಹೊಡೆದು , ಸಾಕ್ಷಿ-1 ರವರಿಗೆ ಕಾಲಿಂದ ಒದ್ದು , 1ನೇ ಮತ್ತು 2ನೇ ಆರೋಪಿಗಳಾದ ನೀವು ಕೈಯಿಂದ ಮೈಕೈಗೆ ಗುದ್ದಿ , ಸಾಕ್ಷಿ-2 ರವರಿಗೆ ಕೈಗಳಿಂದ ಮೈಕೈಗೆ, ಎದಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಮಾಡಿದ್ದರಿಂದ ಭಾ.ದಂ.ಸಂ ಕಲಂ 323 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹವಾದ ಅಪರಾದವನ್ನೆಸಗಿರುವಿರೆಂದು ನಿಮ್ಮ ವಿರುದ್ಧ ದೋಷಾರೋಪಿಸಲಾಗಿದೆ.

ಮಾರನೇಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ 2ನೇ ಆರೋಪಿ ಚಾಸಾ-1ರವರಿಗೆ ದೊಣ್ಣೆಯಿಂದ ಬೆನ್ನಿಗೆ ಹೊಡೆದು , 2ನೇ ಸಾಕ್ಷಿ-2 ರವರಿಗೆ ದೊಣ್ಣೆಯಿಂದ ಬಲಮೊಣಕೈಗೆ ಹಕೊಡೆದು , ಕಲ್ಲಿನಿಂದ ಮುಖದ ಹತ್ತಿರ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಮಾಡಿದ್ದರಿಂದ ಭಾ.ದಂ.ಸಂ ಕಲಂ 324 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹವಾದ ಅಪರಾದವನ್ನೆಸಗಿರುವಿರೆಂದು ನಿಮ್ಮ ವಿರುದ್ಧ ದೋಷಾರೋಪಿಸಲಾಗಿದೆ.

ಕೊನೇಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ , ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ-2ರವರಿಗೆ ವಾಚ್ಯ ಶಬ್ದಗಳಿಂದ ಬೈದು ಅವರನ್ನು ಅವಮಾನಿಸಿ ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡಿ ಭಾ.ದಂ.ಸಂ.ಕಲಂ.504 ಸಹವಾಚಕ 34ರಡಿಯಲ್ಲಿ ಶಿಕ್ಷಾರ್ಹವಾದ ಅಪರಾದವನ್ನೆಸಗಿರುವಿರೆಂದು ನಿಮ್ಮ ವಿರುದ್ಧ ದೋಷಾರೋಪಿಸಲಾಗಿದೆ.

ಮೇಲ್ಕಂಡ ದೋಷಾರೋಪಣೆಗೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲು ಈ ಮೂಲಕ ನಾನು ನಿರ್ದೇಶಿಸಿರುತ್ತೇನೆ.

ದಿನಾಂಕ : 21.07.2015

ಸಹಿ/-
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ನಂಜನಗೂಡು

## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ನಂಜನಗೂಡು

## ಸಿ.ಸಿ.1234/2013

ಫಿರ್ಯಾದಿಃ ರಾಜ್ಯದ ಪರವಾಗಿ ಕವಲಂದೆ ಪೋಲೀಸ್ ಠಾಣೆ,

ವಿರುದ್ಧ

ಆರೋಪಿಗಳುಃ
1. ಕುಳ್ಳೇಗೌಡ , ಬಿನ್ ಲೇಟ್ ಕ್ಯಿಯೇಗೌಡ , 56 ವರ್ಷ ,
2. ಶಿವರಾಜು , ಬಿನ್ ಕುಳ್ಳೇಗೌಡ , 42 ವರ್ಷ ,
ಇಬ್ಬರೂ ಚಿನ್ನಂಬಳ್ಳಿ ಗ್ರಾಮ , ನಂಜನಗೂಡು ತಾಃ ವಾಸಿಗಳು.

ಃ ಆಪಾದನೆ ಃ

ಪ್ರಶ್ನೆಃ1 ಃ ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿನಗೆ ಅರ್ಥವಾಯಿತೆ?
ಉತ್ತರ ಃ

ಪ್ರಶ್ನೆಃ2 ಃ ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?
ಉತ್ತರ ಃ

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿಃ 21.07.2015 ರಂದು ದೃಢೀಕರಿಸಿದ್ದೇನೆ.

ಸಹಿ/-
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ನಂಜನಗೂಡು